**ದಿನಾಂಕಃ 21-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ದೂರುದಾರರ ಪರ ವಕೀಲರಾದ ಶ್ರೀ.ಪಿ.ವಿ.ಕೆ ವಕೀಲರಿಂದಃ**

ದೂರುದಾರರ ಅಣ್ಣ ನಾನು ಕೊಟ್ಟಿದ್ದ ಚೆಕ್ ನ್ನು ದುರ್ಬಳಕೆ ಮಾಡಿಕೊಂಡಿದ್ದಾನೆ ಎಂದು ಆತನ ವಿರುದ್ಧ ನಾನು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದೂರುದಾರರ ಅಣ್ಣನಾದ ಶ್ರೀಪಾದ್ ಕಡೆಯಿಂದ ನಾನು ಸಾಲ ಪಡೆದಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನಾನು ದೂರುದಾರರ ಅಂಗಡಿಯಲ್ಲಿ ಮಟಿರಿಯಲ್ಸ ಖರೀದಿ ಮಾಡಿದ್ದು ಆ ಬಾಬ್ತು ಹಣ ಪಾವತಿಗಾಗಿ ಮೂರು ಚೆಕ್ ಗಳನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆ ಪೈಕಿ ನಾನು ಕೊಟ್ಟಿದ್ದ ನಿಪಿ-1 ಚೆಕ್ ಅಮಾನ್ಯಗೊಂಡಿದ್ದು ಆ ಬಗ್ಗೆ ಈ ಕೇಸು ಹಾಕಿರುತ್ತಾರೆ

**D.W-1**

ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದ ಇನ್ನೊಂದು ಚೆಕ್ ಸಹ ಅಮಾನ್ಯಗೊಂಡಿದ್ದುದ ಆ ಬಗ್ಗೆ ಇದೇ ನ್ಯಾಯಾಲಯದಲ್ಲಿ ಸಿಸಿ ನಂ.188/2019 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸುಳ್ಳು ಎಂದು ಸಾಕ್ಷಿ ಹೇಳುತ್ತಾರೆ. ನಾನು ಕೊಟ್ಟಿದ್ದ ಇನ್ನೊಂದು ಚೆಕ್ ನಂ.000453 Material Alteration ಆಗಿದೆ ಎಂದು ವಾಪಸ್ಸು ಬಂದಿದ್ದರಿಂದ ಆ ಬಗ್ಗೆ ಇದೇ ನ್ಯಾಯಾಲಯದಲ್ಲಿ ಪಿ.ಸಿ.ಆರ್. ನಂ.173/2022 ರಂತೆ ಖಾಸಗಿ ಫಿರ್ಯಾದಿಯನ್ನು ದೂರುದಾರರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-11 ರಿಂದ 21 ಬಿಲ್ ಗಳ ಅಡಿಯಲ್ಲಿ ಖರೀದಿಸಿದ Material ಬಾಬ್ತು ಹಣ ಪಾವತಿಗಾಗಿ ಚೆಕ್ ಗಳನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಿಪಿ-11 ರಿಂದ 21 ರ ಬಿಲ್ಲುಗಳ ಅಡಿಯಲ್ಲಿ ಖರೀದಿಸಿದ ವಸ್ತುಗಳನ್ನು ನಮ್ಮ ಕಂಪನಿಯಲ್ಲಿ ಬಳಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ರೂ.7,30,274/- ಗಳನ್ನು ಪಾವತಿಸಲು ಬಾಧ್ಯನಾಗಿರುತ್ತೇನೆ ಎಂದರೆ ಸರಿಯಲ್ಲ. ಆ ಪೈಕಿ ರೂ.2,89,401/- ಹಣದ ಮರುಪಾವತಿಗಾಗಿ ನಿಪಿ-1 ಚೆಕ್ ನ್ನು ನಾನು ದೂರುದಾರರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಸದರಿ ಚೆಕ್ ನ್ನು ದೂರುದಾರರ ಅಣ್ಣನಿಗೆ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.